ಇ) ಇದರ ಅಂದಾಜು ಮೊತ್ತ ಎಷ್ಟು: ಕಾಮಗಾರಿಯ ವಿವರಗಳೇನು: ಇಲ್ಲಯವರೆಗೆ ಮಾಡಿರುವ ಕೆಲಸಗಳೇನು: ಇಲ್ಲಿ ಅಂದಾಜು ಪತ್ರದಂತೆ ಮಾಡಿರುವ ಕಾಮಗಾರಿಗಳಾವುವು: ಖರ್ಚಾಗಿರುವ ಹಣ ಎಷ್ಟು: ಈ ಕಾಮಗಾರಿಯನ್ನು ಪೂರ್ತಿಗೊಳ್ಳದಿರಲು ಕಾರಣಗಳಾವುವು:

ಈ) ಒಂದು ವೇಳೆ ಮಧ್ಯದಲ್ಲಿ 100-200 ಅಡಿ ಯಾರಾದರೂ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರೆ ಎರಡು ಕಡೆಯಿಂದ ಮಾಡಿರುವ ರಸ್ತೆಯನ್ನು ಅಂದಾಜು ಪತ್ರದಂತೆ ಪೂರ್ತಿಗೊಳಿಸದಿರಲು ಕಾರಣಗಳಾವುವು:

ಉ) ಇಂತಹ ಮೇಲೆ ಕೈಗೊಳ್ಳುವ ಕ್ರಮವೇನು ಇದನ್ನು ಪೂರ್ತಿಗೊಳಿಸುವುದು ಯಾವಾದ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಹೌದು.

ಆ) ಸದರಿ ಕಾಮಗಾರಿಯ ಹತ್ತಿರದ ಜಮೀನಿನವರು 60 ಮೀಟರ್‌ನಷ್ಟು ಉದ್ದದ ರಸ್ತೆ ಕಾಮಗಾರಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

ಇ) ಇದರ ಅಂದಾಜು ಮೊತ್ತ ರೂ. 50.00 ಲಕ್ಷಗಳಿದ್ದು, ಟೆಂಡರ್ ಪ್ರೀಮಿಯಂ ಶೇ. 30 ಸೇರಿ ಒಟ್ಟು ಕಾಮಗಾರಿಯ ಮೊತ್ತ ರೂ. 65.00 ಲಕ್ಷಗಲಾಗುತ್ತದೆ. ಸೇಡಂನಿಂದ ಚಿಂಚೋಳಿ ರಿಂಗ್ ರಸ್ತೆ ಒಟ್ಟು 3000 ಮೀ. ಉದ್ದವಿದ್ದು, ಇದರಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ಇರುವ 60 ಮೀ. ಉದ್ದವನ್ನು ಬಿಟ್ಟು ಉಳಿದ ಕೆಲಸ ಮುಗಿದಿರುತ್ತದೆ. ಇಲ್ಲಿಯವರೆಗೆ ರೂ. 60.76 ಲಕ್ಷಗಳು ಖರ್ಚಾಗಿರುತ್ತದೆ. ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಉಳಿದ 60 ಮೀ ಉದ್ದ ರಸ್ತೆ ಕಾಮಗಾರಿ ಸ್ಥಗಿತಗೊಂಡಿರುತ್ತದೆ.

ಈ) ನ್ಯಾಯಾಲಯ ತಡೆಯಾಜ್ಞೆಯಿಂದ ಸ್ಥಗಿತಗೊಂಡಿರುವ 60 ಮೀ. ಕಾಮಗಾರಿ ಬಿಟ್ಟು ಅಂದಾಜು ಪಟ್ಟಿಯಂತೆ ಉಳಿದ ಎಲ್ಲಾ ಕಾಮಗಾರಿಗಳು ಮುಗಿದಿರುತ್ತವೆ.

ಉ) ಉದ್ಭವಿಸುವುದಿಲ್ಲ.

ನ್ಯಾಯಾಲಯದ ತಡೆಯಾಜ್ಞೆ ತೆರವು ಆದ ನಂತರ ಉಳಿದ ಕಾಮಗಾರಿಯನ್ನು ಕೈಗೊಂಡು ಪೂರ್ತಿಗೊಳಿಸಲಾಗುವುದು.

ಸೇಡಂ ಕ್ಷೇತ್ರದಲ್ಲಿ ಬಸ್ಸುಗಳ ಸಂಚಾರ ವ್ಯವಸ್ಥೆ

2033 (2513) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರ (ಚಿತ್ತಾಪೂರ ತಾಲ್ಲೂಕಿನ 1 ಗ್ರಾಮಗಳು 20 ತಾಂಡಾಗಳು ಸೇರಿ) ದಲ್ಲಿ ಈಶಾನ್ಯ ವಲಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಬಹುತೇಕ ಗ್ರಾಮಗಳಿಗೆ ಮೊದಲಿನಿಂದ ಓಡುತ್ತಿದ್ದ ಬಸ್ಸುಗಳನ್ನು ಸಹ ಸ್ಥಗಿತಗೊಳಿಸಿ, ನಾಗರೀಕರಿಗೆ ಅನಾನುಕೂಲ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೋಟ್ಯಾನುಗಟ್ಟಲೆ ರೂ.ಗಳು ಖರ್ಚು ಮಾಡಿ ಹೊಸ ರಸ್ತೆಗಳ ನಿರ್ಮಾಣ ಮಾಡಿದರೂ ಸಹ ಆ ಗ್ರಾಮಗಳಿಗೆ ಬಸ್ಸುಗಳ ಸಂಪರ್ಕ ಕಲ್ಪಿಸದೇ ನಾಗರೀಕರಿಗೆ ತೊಂದರೆಯುಂಟು ಮಾಡುತ್ತಿರುವುದು ನಿಜವಲ್ಲವೇ;

ಇ) ಕರ್ನಾಟಕ ರಾಜ್ಯದಲ್ಲಿ 3-4 ಸಾರಿಗೆ ವಲಯಗಳನ್ನು ಮಾಡಿರುವುದರಿಂದ, ಸಂಪರ್ಕದ ಅನುಕೂಲತೆಗಳು ಹೆಚ್ಚಾಗಿರುವುದು ಎಂಬ ಭಾವನೆಗಳು ಈಡೇರದೆ ಮೊದಲಿಗಿಂತ ಹೆಚ್ಚಿನ ತೊಂದರೆಯಾಗುತ್ತಿರಲು ಕಾರಣಗಳೇನು;

ಈ) ಇವುಗಳನ್ನು ಸರಿಪಡಿಸಿ ನಾಗರೀಕರಿಗೆ ಸಂಪರ್ಕ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಚಿತ್ತಾಪುರ ತಾಲ್ಲೂಕಿನಲ್ಲಿ ಒಟ್ಟು 121 ಗ್ರಾಮಗಳಿರುತ್ತದೆ. ಇವುಗಳ ಪೈಕಿ 89 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು, ಇನ್ನುಳಿದ 32 ಗ್ರಾಮಗಳಿಗೆ ವಾಹನ ಸಂಚಾರಕ್ಕೆ ಯೋಗ್ಯವಾದ ರಸ್ತೆಗಳಿಲ್ಲದಿರುವುದರಿಂದ ಬಸ್ ಸೌಕರ್ಯ ಒದಗಿಸಿರುವುದಿಲ್ಲ. ಜಿಲ್ಲಾ ಪಂಚಾಯತ್ ಮತಿಯಿಂದ ರಸ್ತೆ ಸಂಪರ್ಕ ಇಲ್ಲದಿರುವ ಎಲ್ಲಾ ಗ್ರಾಮಗಳಿಗೆ ರಸ್ತೆಸಂಪರ್ಕವನ್ನು ಒದಗಿಸಲು ಕೋರಲಾಗಿದ್ದು, ರಸ್ತೆ ಸಂಪರ್ಕ ಕಲ್ಪಿಸಿದ ನಂತರ ಈ ಗ್ರಾಮಗಳಿಗೆ ಬಸ್ ಸಂಚಾರ ವ್ಯವಸ್ಥೆಯನ್ನು ಒದಗಿಸಲಾಗುವುದು.

ಚಿತ್ತಾಪುರ ತಾಲ್ಲೂಕು ವಿವಿಧ ಹಳ್ಳಿಗಳಿಗೆ ಸಂಸ್ಥೆ ಪ್ರಾರಂಭಗೊಂಡಾಗ ಇರುವ ಟ್ರಿಪ್‌ಗಳು ಮತ್ತು ಹಾಲಿ ಇರುವ ಟ್ರಿಪ್‌ಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ರಸ್ತೆ ಸಾರಿಗೆ ಸಂಸ್ಥೆಯನ್ನು ವಲಯಗಳನ್ನಾಗಿ ವಿಭಜಿಸಿದ ನಂತರ ಸಾರಿಗೆ ವ್ಯವಸ್ಥೆ ಉತ್ತಮಗೊಂಡಿದೆ.

ಈ) ಮುಂಬರುವ ವರ್ಷಗಳಲ್ಲಿ ರಸ್ತೆ ಸಂಪರ್ಕ ಕಲ್ಪಿಸಿ, ಸಾರಿಗೆ ವ್ಯವಸ್ಥೆಯನ್ನು ಒದಗಿಸಲು ಕ್ರಮ ಜರುಗಿಸಲಾಗುವುದು.

ಸೇಡಂ ತಾಲ್ಲೂಕಿನ ನೆರಟ್ಲಾಪಾಡ್ ಕೆರೆಯ ಹಾಗೂ ಕಾಲುವೆಗಳ ದುರಸ್ಥಿ

2034 (2515) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ನರತಲವಾಡ ಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಮಾಡದೆ ರೈತರಿಗೆ ಪರಿಹಾರ ಹಣ ನೀಡದೆ ಹೊಲಗಳಲ್ಲಿ ದೊಡ್ಡ ದೊಡ್ಡ ಕಾಲುವೆಗಳನ್ನು ತೋಡಿ ಬೆಳೆ ಬೆಳೆಯದಂತೆ ನಷ್ಟ ಮಾಡಿ ನೀರಾವರಿ ಸರಬರಾಜು ಆಗದೇ ಇರುವ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೈತರಿಗೆ ಪರಿಹಾರ ಹಣ ನೀಡದೇ ಫಲವತ್ತಾದ ಜಮೀನಿನಲ್ಲಿ ದೊಡ್ಡ ಕಾಲುವೆಗಳು ತೋಡಿರುವುದರಿಂದ ಜಮೀನು ನಷ್ಟವಾಗಿ ಮಳೆಗಾಲದಲ್ಲಿ ಕಾಲುವೆಗಳಲ್ಲಿ ನೀರು ಬಂದು ಹೊಲಗಳಲ್ಲಿ ಹರಿದು ಬೆಳೆ ಇಲ್ಲದೇ ರೈತರು ನಷ್ಟವನ್ನು ಅನುಭರಿಸುತ್ತಿರುವುದು ನಿಜವಲ್ಲವೇ?

ಇ) ಈ ಎರಡು ಅಥವಾ ಮೂರು ವರ್ಷಗಳಿಂದ ಇಲ್ಲಿಯವರೆಗೆ ಈಗಲಾದರೂ ಸಹ ಕಾಲುವೆಗಳು ಆಗದೇ ಬೆಳೆ ನಷ್ಟವಾಗಿರುವ ಹಣವನ್ನು ಹಾಗೂ ಪರಿಹಾರವನ್ನು ಕೊಡಿಸಿ ರೈತರಿಗೆ ನೀರಾವರಿ ಸೌಲಭ್ಯ ಇದೇ ವರ್ಷ ಮಾರ್ಚ್ ಒಳಗಾಗಿ ಒದಗಿಸಬಹುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):